ಶ್ರೀ ಆರ್. ಎಲ್. ಜಾಲಪ್ಪ.—ಚಿತ್ರದುರ್ಗದಿಂದ ಫೈರ್ ಬ್ರಿಗೇಡ್‌ನವರು ಹೋಗಬೇಕು. ಪ್ರತಿಯೊಂದು ತಾಲ್ಲೂಕಿನಲ್ಲೂ ಫೈರ್ ಬ್ರಿಗೇಡ್‌ನವರು ಇರಬೇಕೆಂದರೆ ಎಕ್ಸ್‌ಪೆಂಡೀಚರ್ ಜಾಸ್ತಿಯಾಗುತ್ತದೆ ಅದು ಆಗುವುದಿಲ್ಲ. ಕಾಲ್ ಬಂದ ತಕ್ಷಣ ಹೋಗಿ ಅಟೆಂಡ್ ಮಾಡಲಿಕ್ಕೆ ಇವರಿಗೆ ಸೂಚನೆ ಕೊಡುತ್ತೇನೆ.

12) ರಾಜ್ಯದಲ್ಲಿ ವಿಮಾನಿನ ಕ್ಷಾಮದ ಬಗ್ಗೆ

ಶ್ರೀ ಬಿ. ಎಂ. ಇದಿನಬ್ಬ.—ಕಳೆದ ಎರಡು ವಿಮಾನುಗಾರಿಕಾ ಋತುಮಾನಗಳಲ್ಲಿ ವಿಮಾನಿನ ಸಂಗ್ರಹ ಗಣನೀಯವಾಗಿ ಕಡಿಮೆಯಾಗಿದೆ. ಕಳೆದ ಎರಡು ವರ್ಷಗಳಲ್ಲೂ ವಿಮಾನಿನ ಕ್ಷಾಮ ಒದಗಿದೆ. ಆದರೂ ಸರ್ಕಾರ ಈ ವರ್ಷವನ್ನು ವಿಮಾನಿನ ಕ್ಷಾಮದ ವರ್ಷಗಳೆಂದು ಘೋಷಣೆ ಮಾಡಲೇ ಇಲ್ಲ. ಕೃಷಿಯಲ್ಲಿ ಒಂದು ಬೆಳೆ ನಷ್ಟವಾದರೆ ಇತರ ಎರಡೂ ಬೆಳೆಗಳನ್ನು ಬರ ಪರಿಹಾರ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವಂತೆ ಕಾಯಿದೆ ಇದೆ. ಅದೇ ರೀತಿ ವಿಮಾನು ಕ್ಷಾಮದಲ್ಲಿಯೂ ಕಾಯಿದೆ ತಂದು ವಿಮಾನುಗಾರರಿಗೆ ಉಪಕಾರ ಮಾಡಬೇಕು. ವಿಮಾನು ಕ್ಷಾಮದ ಬಗ್ಗೆ ಘೋಷಣೆಯನ್ನು ಸರ್ಕಾರ ಮಾಡಬೇಕು. ಈ ಕುರಿತು ವಿಮಾನುಗಾರಿಕಾ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಊರಿನಲ್ಲಿ ಇಲ್ಲ. ವರದಿಯನ್ನು ತರಿಸಿಕೊಡುತ್ತೇನೆ.

13) ಪುತ್ತೂರು ತಾಲ್ಲೂಕಿನಲ್ಲಿ ರೈತರಿಗೆ ಸ್ವಂತ ಉಪಯೋಗಕ್ಕಾಗಿ ಭತ್ತವನ್ನು ಹಲ್ ಮಾಡುವಾಗ ತೊಂದರೆಯಾಗಿರುವುದು.

ಶ್ರೀ ವಿನಯಕುಮಾರ್ ಸೊರ್ಕೆ.—ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನಲ್ಲಿ ತನ್ನ ಸ್ವಂತ ಉಪಯೋಗಕ್ಕೋಸ್ಕರ ಹಲ್ಲರ್ ಉಪಯೋಗ ಮಾಡುವ ರೈತರಿಗೆ ಲೆವಿ ಹಾಕುವ ಬಗ್ಗೆ ತುಂಬಾ ತೊಂದರೆಯಾಗಿದೆ. ಈ ವರ್ಷಕ್ಕೆ ಹೊಂದಿಕೊಂಡು ನೋಡಿದರೆ ಮಳೆ ಸಮಯಕ್ಕೆ ಸರಿಯಾಗಿ ಬಾರದೇ, ಒಂದನೆಯ ಭತ್ತದ ಬೆಳೆಯೂ ಸಮಯಕ್ಕೆ ಸರಿಯಾಗಿ ನಾಟಿಯಾಗದೇ, ಬಿಟ್ಟು ಹಾಗೂ ಮಜಲು ಗದ್ದೆಗಳ ಬೇಸಾಯ ಮಾಡದೇ ಉಳಿದಿರುವುದರಿಂದ ರೈತರಿಗೆ ತುಂಬಾ ಕಷ್ಟನಷ್ಟ ಉಂಟಾಗಿದೆ. ಹಲ್ಲರ್ ನಡೆಸಲು ಲೈಸನ್ಸ್ ಕೊಡದೇ ಇದ್ದು ಲೆವಿ ಹಾಕುವಾಗ ಸ್ವಂತ ಬಳಕೆಗೋಸ್ಕರ ಹಲ್ಲರ್ ಹಾಕಿದವರಿಗೂ ಲೆವಿಹಾಕಲು ಸಾಧ್ಯವಾಗುವುದಿಲ್ಲ ಎಂದು ತಮ್ಮ ಕಷ್ಟವನ್ನು ತೋಡಿಕೊಂಡಾಗ ರೈತರ ಮೇಲೆ ಲೈಸೆನ್ಸ್ ಇಲ್ಲದೇ ತಮ್ಮ ಸ್ವಂತಕ್ಕೋಸ್ಕರ ಹಲ್ಲರ್ ನಡೆಸುವುದು ತಪ್ಪು ಎಂದು ಕಾನೂನು ಪ್ರಕಾರ ಕೇಸು ದಾಖಲು ಮಾಡುವುದಾಗಿ ಉತ್ತರ ಬರುತ್ತದೆ. ಇದರಿಂದ ರೈತರಿಗೆ ಕಷ್ಟನಷ್ಟಗಳು ಸಂಭವಿಸುತ್ತದೆ. ಆದುದರಿಂದ, ತನ್ನ ಸ್ವಂತ ಬಳಕೆಗೋಸ್ಕರ ಹಲ್ಲರ್‌ನ್ನು ಯಾವ ರೈತರು ಉಪಯೋಗ ಮಾಡುತ್ತಾರೆ, ಅಂತಹ ರೈತರಿಗೆ ಈ ವರ್ಷಕ್ಕೆ ಹೊಂದಿಕೊಂಡು ಲೆವಿಯನ್ನು ವನ್ನಾ ಮಾಡಬೇಕಾಗಿ ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪಿಸಿರತಕ್ಕ ವಿಚಾರವನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಉತ್ತರವನ್ನು ಕಳುಹಿಸಿಕೊಡುವಂತೆ ತಿಳಿಸುತ್ತೇನೆ.

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠಕ್ಕೆ ಆಗಮಿಸಿದರು.)

14) ದಾವಣಗೆರೆಯಲ್ಲಿ ನಾಲ್ಕು ನೂಲಿನ ಗಿರಣಿಗಳು ಮುಚ್ಚಿರುವುದರಿಂದ ಕಾರ್ಮಿಕರು ಕಂಗಾಲಾಗಿರುವುದು.

ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ದಾವಣಗೆರೆಯಲ್ಲಿ ನಾಲ್ಕು ನೂಲಿನ ಗಿರಣಿಗಳು ಮುಚ್ಚಿ ಸುಮಾರು ೮ ತಿಂಗಳಾಯಿತು. ಆ ಕೈಗಾರಿಕೆಗಳಲ್ಲಿ ಸುಮಾರು